**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಶಾಲನಗರ.**

**ಉಪಸ್ಥಿತರು : ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ .,**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಕುಶಾಲನಗರ**

**ಸಿ.ಸಿ., 525/2020**

**ದಿನಾಂಕ: 30 ನೇ ಏಪ್ರಿಲ್ 2026**

**ಪಿರ್ಯಾದಿ** : **ಕರ್ನಾಟಕ ಸರ್ಕಾರ**

( **ಸ.ಸ.ಅ. ಕುಶಾಲನಗರ** )

**ವಿರುದ್ಧ**

**ಆರೋಪಿ** : **ಶ್ರೀನಿವಾಸ**
**40 ವರ್ಷ,**
**ವಾಸ: ವೆಂಕಟೇಶ್ವರ ಬಡಾವಣೆ,**
**ಕಾಳಮ್ಮ ಕಾಲೋನಿ, ಕುಶಾಲನಗರ.**

( **ವಕೀಲರಾದ ಶ್ರೀ ಹೆಚ್. ಸಿ. ಮೋಹನ್ ಕುಮಾರ್ ರವರ ಮುಖಾಂತರ ಪ್ರತಿನಿಧಿಸಲ್ಪಟ್ಟಿದ್ದಾರೆ.** )

**ತೀರ್ಪು**

ಆರಕ್ಷಕ ಉಪನಿರೀಕ್ಷಕರು, ಕುಶಾಲನಗರ ನಗರ ಪೋಲಿಸ್ ಠಾಣೆ, ಕುಶಾಲನಗರ ಇವರು ಆರೋಪಿ ವಿರುದ್ಧ ಭಾ.ದಂ.ಸಂ.ಕಲಂ 498 ಎ, 323 ಹಾಗೂ 504 ರ ಅಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಆರೋಪ ಮಾಡಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

ದಿನಾಂಕ 25.01.2020 ರಂದು ಬೆಳ್ಳಿಗ್ಗೆ 11.00 ಗಂಟೆಯ ಸಮಯದಲ್ಲಿ ಕುಶಾಲನಗರ ನಗರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಕಾಳಮ್ಮ

ಕಾಲೋನಿಯಲ್ಲಿ ಚಾಸಾ 1 ರವರು ದಿನಾಂಕ 24.10.2004 ರಂದು ಮದುವೆ ಮಾಡಿಕೊಂಡು ಕುಶಾಲನಗರದ ಕಾಳಮ್ಮ ಕಾಲೋನಿಯಲ್ಲಿ ವಾಸ ಮಾಡಿಕೊಂಡು ಸಂಸಾರ ನಡೆಸುತ್ತಿದ್ದು 3 ವರ್ಷ ಕಳೆದ ನಂತರ ಆರೋಪಿಯು ಚಾಸಾ 1 ರವರೊಂದಿಗೆ ಜಗಳ ಮಾಡುತ್ತಾ ಅವ್ಯಾಚ ಶಬ್ದಗಳಿಂದ ನೀನು ಸೂಳೆ, ಕಂಡಕಂಡವನ ಜೊತೆ ಓಡಾಡುತ್ತೀಯಾ, ನೀನು ನಿನ್ನ ತವರು, ಮನೆಗೆ ಹೋಗಿ ಅಲ್ಲಿಯೇ ಇರು, ನನ್ನ ಮನೆಯಲ್ಲಿ ಇರಬೇಡ ಎಂದು ಬೈಯುತ್ತಾ ಕೈಯಿಂದ ಶರೀರಕ್ಕೆ ಹೊಡೆದು ನೋವುಂಟು ಮಾಡಿ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ಕೊಡುತ್ತಿದ್ದ ಕಾರಣ ಚಾಸಾ 1 ರವರು ಸುಮಾರು 3 ವರ್ಷದ ಹಿಂದೆ ಆಕೆಯ ತವರು ಮನೆಗೆ ಹೋಗಿದ್ದು, ಪುನ: ಮರಳಿ ದಿನಾಂಕ 25.01.2020 ರಂದು ಕುಶಾಲನಗರ ಕಾಳಮ್ಮ ಕಾಲೋನಿಯಲ್ಲಿರುವ ತನ್ನ ಗಂಡನ ಮನೆಗೆ ಬಂದಂತಹ ಸಂದರ್ಭದಲ್ಲಿ ಬೆಳ್ಳಿಗ್ಗೆ 11.00 ಗಂಟೆ ವೇಳೆಯಲ್ಲಿ ಆರೋಪಿತನು ಚಾಸಾ 1 ರವರನ್ನು ಕುರಿತು ಅವ್ಯಾಚ ಶಬ್ದಗಳಿಂದ ನೀನು ಸೂಳೆ ಮುಂಡೆ, ಮನೆಯಿಂದ ಹೋದವಳು ಈಗ ಏಕೆ ? ಮನೆಗೆ ಬರುತ್ತೀಯಾ, ನೀನು ನನ್ನ ಮೇಲೆ ಜೀವನಾಂಶ ಪಡೆಯಲು ಕೇಸು ಹಾಕಿರುತ್ತೀಯಾ ಎಂದು ಬೈಯುತ್ತಾ ಕೈಯಿಂದ ಹಿಡಿದು ಎಳೆದಾಡಿ, ಕೆನ್ನೆಗೆ ಹಾಗೂ ಶರೀರಕ್ಕೆ ಹೊಡೆದು ನೋವುಂಟು ಮಾಡಿ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ಕೊಟ್ಟಿರುವುದು ಚಾಸಾ 1 ರವರು ಕುಶಾಲನಗರ ನಗರ ಪೋಲಿಸರಿಗೆ ನೀಡಿದ ದೂರಿನನ್ವಯ ಪೋಲಿಸರು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ 3/2020 ರಲ್ಲಿ ಪ್ರಕರಣ ದಾಖಲಿಸಿ ತನಿಖಾಧಿಕಾರಿಗಳು ಕೃತ್ಯ ಜಾಗದ ಮಹಜರು ಕ್ರಮ ಜರುಗಿಸಿ ಸಾಕ್ಷಿದಾರರುಗಳ ಹೇಳಿಕೆಗಳನ್ನು ಬರೆದುಕೊಂಡು ತನಿಖೆಯನ್ನು ಪೂರೈಸಿ ಭಾ.ದಂ.ಸಂ.ಕಲಂ 498 ಎ, 323 ಹಾಗೂ 504 ರ ಅಡಿಯಲ್ಲಿ ಆರೋಪಿ ಅಪರಾಧ ಮಾಡಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾ.ದಂ.ಸಂ. ಕಲಂ 498 ಎ, 323 ಹಾಗೂ 504 ರಡಿಯಲ್ಲಿ ಈ ಕೇಸಿನ ಸಂಜ್ಞೆಯನ್ನು

ತೆಗೆದುಕೊಂಡು ಆರೋಪಿಗೆ ಸಮನ್ಸ್ ಜಾರಿ ಮಾಡಲಾಗಿ ಆರೋಪಿಯು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಆಗಿರುತ್ತಾರೆ. ಭಾ.ದಂ.ಸಂ, ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತರಿಗೆ ನೀಡಿ ಆರೋಪಣೆಯನ್ನು ರಚಿಸಿ ಆರೋಪಿಗೆ ತಿಳಿಯುವಂತೆ ಓದಿ ಹೇಳಲಾಗಿ ಆರೋಪಿ ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೋರಿರುತ್ತಾರೆ. ಆ ಕಾರಣಕ್ಕಾಗಿ ಪ್ರಕರಣವನ್ನು ವಿಚಾರಣೆಗೆ ಇಡಲಾಯಿತು.

4. ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

**ಅಂಶ: 1. ಅಭಿಯೋಜಕರು ಯಾವುದೇ ಅನುಮಾನಕ್ಕೆ ಆಸ್ಪದ ಇಲ್ಲದಂತೆ, ಆರೋಪಿಯು ಚಾಸಾ–1 ರವರೊಂದಿಗೆ ದಿನಾಂಕ 24.10.2004 ರಂದು ವಿವಾಹವಾಗಿದ್ದು, ಕುಶಾಲನಗರದ ಕಾಳಮ್ಮ ಕಾಲೋನಿಯಲ್ಲಿ ವಾಸ ಮಾಡಿಕೊಂಡು ಸಂಸಾರ ನಡೆಸುತ್ತಿದ್ದಾಗ, ಸುಮಾರು 3 ವರ್ಷಗಳ ನಂತರ ಚಾಸಾ–1 ರವರಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಾ, ಅವಾಚ್ಯ ಶಬ್ದಗಳಿಂದ "ನೀನು ಸೂಳೆ, ಕಂಡಕಂಡವನ ಜೊತೆ ಓಡಾಡುತ್ತೀಯಾ, ನೀನು ನಿನ್ನ ತವರು ಮನೆಗೆ ಹೋಗಿ ಅಲ್ಲಿಯೇ ಇರು, ನನ್ನ ಮನೆಯಲ್ಲಿ ಇರಬೇಡ" ಎಂದು ಬೈದು, ಹಾಗೂ ದಿನಾಂಕ 25.01.2020 ರಂದು ಬೆಳಿಗ್ಗೆ 11.00 ಗಂಟೆಯ ವೇಳೆಯಲ್ಲಿ ಚಾಸಾ–1 ರವರು ಆರೋಪಿಯ ಮನೆಗೆ ಬಂದ ಸಂದರ್ಭದಲ್ಲಿ " ನೀನು ಸೂಳೆ ಮುಂಡೆ, ಮನೆಯಿಂದ ಹೋದವಳು ಈಗ ಏಕೆ ಮನೆಗೆ ಬರುತ್ತೀಯಾ, ನೀನು ನನ್ನ ಮೇಲೆ ಜೀವನಾಂಶ ಪಡೆಯಲು ಕೇಸು ಹಾಕಿದ್ದೀಯಾ" ಎಂದು ಅವಮಾನಿಸಿ, ಕೈಯಿಂದ ಹೊಡೆದು ಶರೀರಕ್ಕೆ ನೋವುಂಟು ಮಾಡುವ ಮೂಲಕ ಭಾ.ದಂ.ಸಂ. ಕಲಂ 498 ಎ, 504 ಮತ್ತು 323 ಅಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?**

**ಅಂಶ: 2:**ಯಾವ ಆದೇಶ?

**5.** ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಒಟ್ಟು 9 ಜನ ಸಾಕ್ಷಿದಾರರಿದ್ದು ಅವರಲ್ಲಿ ಅಸಾ 1 ರಿಂದ ಅಸಾ 6 ರವರನ್ನು ಮಾತ್ರ ವಿಚಾರಣೆಗೆ ಒಳಪಡಿಸಿದ್ದು ನಿಶಾನೆ ಪಿ. 1 ರಿಂದ ನಿಶಾನೆ.ಪಿ. 7 ರಂತೆ ದಾಖಲೆಗಳನ್ನು ಗುರುತಿಸಿಕೊಳ್ಳಲಾಯಿತು.

6. ಅಭಿಯೋಜನೆಯ ಪರ ಸಾಕ್ಷಿಗಳ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿಯ ಹೇಳಿಕೆಯನ್ನು ಬರೆದುಕೊಳ್ಳಲಾಗಿದ್ದು ಆರೋಪಿಯು ಅಭಿಯೋಜನೆಯ ಪ್ರಕರಣವನ್ನು ಸಂಪೂರ್ಣವಾಗಿ ಸುಳ್ಳು ಎಂದು ಹೇಳಿ ತಮ್ಮ ಪರ ಯಾವುದೆ ಸಾಕ್ಷಿ ವಿಚಾರಣೆಯನ್ನು ಮಾಡಿಸಿರುವುದಿಲ್ಲ.

7. ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು.

8. ಈ ಮೇಲಿನ ಅಂಶಕ್ಕೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇರುತ್ತದೆ,

ಅಂಶ ಸಂಖ್ಯೆ: 1 : ನಕರಾತ್ಮಕವಾಗಿ
ಅಂಶ ಸಂಖ್ಯೆ: 2 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ.

**ಕಾರಣಗಳು**

**ಅಂಶ ಸಂಖ್ಯೆ: 1** :

9. ಈ ನ್ಯಾಯಾಲಯವು ಅಭಿಯೋಜಕರು ಹಾಗೂ ಆರೋಪಿಯ ಪರ ವಕೀಲರು ಮಂಡಿಸಿದ ವಾದಗಳನ್ನು, ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ, ಪರಿಗಣನೆಗೆ ತೆಗೆದುಕೊಂಡಿರುವ ಪ್ರಶ್ನೆಯನ್ನು ನಿರ್ಧರಿಸಲು ಮುಂದಾಗಿದೆ. ಕ್ರಿಮಿನಲ್ ನ್ಯಾಯವಿಧಾನದಲ್ಲಿ, ಆರೋಪವನ್ನು ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸುವ ಹೊಣೆಗಾರಿಕೆ ಸಂಪೂರ್ಣವಾಗಿ ಅಭಿಯೋಜಕರ

ಮೇಲಿದೆ ಎಂಬುದು ಅತ್ಯಂತ ಸ್ಥಿರವಾದ ಕಾನೂನು ತತ್ವವಾಗಿದೆ. ಈ ತತ್ವದ ಪ್ರಕಾರ, ಪ್ರಾಸಿಕ್ಯೂಷನ್ ಮಂಡಿಸುವ ಸಾಕ್ಷ್ಯವು ಕೇವಲ ಸಂಶಯರಹಿತವಾಗಿರುವುದಷ್ಟೇ ಅಲ್ಲದೆ, ಅದು ಸ್ಪಷ್ಟ, ನಿರಂತರ ಮತ್ತು ವಿಶ್ವಾಸಾರ್ಹವಾಗಿರಬೇಕು. ಯಾವುದೇ ರೀತಿಯ ಗಂಭೀರ ಸಂಶಯಗಳು ಕಂಡುಬಂದಲ್ಲಿ, ಆ ಸಂಶಯದ ಲಾಭವನ್ನು ಆರೋಪಿಗೆ ನೀಡುವುದು ನ್ಯಾಯೋಚಿತವಾಗಿದೆ. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಭಾ.ದಂ.ಸಂ. ಕಲಂ 498 ಎ, 323 ಮತ್ತು 504 ಅಡಿಯಲ್ಲಿ ಆರೋಪಗಳನ್ನು ಹೊರಿಸಲಾಗಿದ್ದು, ಈ ಎಲ್ಲಾ ಅಂಶಗಳನ್ನು ಪ್ರತ್ಯೇಕವಾಗಿ ಮತ್ತು ಸಮಗ್ರವಾಗಿ ಪರಿಶೀಲಿಸುವುದು ಅಗತ್ಯವಾಗಿದೆ.

**10**. ಪ್ರಕರಣದ ಮೂಲಭೂತ ಅಂಶಗಳನ್ನು ಪರಿಶೀಲಿಸಿದಾಗ, ಚಾಸಾ–1 ಮತ್ತು ಆರೋಪಿಯ ನಡುವೆ ವೈವಾಹಿಕ ಸಂಬಂಧವಿರುವುದು ವಿವಾದಾತೀತವಾಗಿದೆ. ಈ ಸಂಬಂಧವನ್ನು ದೃಢಪಡಿಸುವ ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ 3 ಎಂದು ಗುರುತಿಸಲಾಗಿದ್ದು, ಅದನ್ನು ಯಾವುದೇ ಪಾರ್ಶ್ವದಿಂದ ಪ್ರಶ್ನಿಸಲಾಗಿಲ್ಲ. ಇದರಿಂದ, ಇಬ್ಬರೂ ಪತಿ–ಪತ್ನಿಗಳಾಗಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಆದಾಗ್ಯೂ, ಕೇವಲ ವೈವಾಹಿಕ ಸಂಬಂಧ ಇರುವುದೇ ಅಪರಾಧ ಸಾಬೀತಾಗಲು ಸಾಕಾಗುವುದಿಲ್ಲ. ಮುಂದಿನ ಪ್ರಶ್ನೆ ಎಂದರೆ, ಈ ವೈವಾಹಿಕ ಸಂಬಂಧದ ಸಂದರ್ಭದಲ್ಲಿ ಆರೋಪಿಯು ಕಾನೂನುಬದ್ಧವಾಗಿ ಶಿಕ್ಷಾರ್ಹವಾಗುವಂತಹ ಕ್ರೌರ್ಯ, ಹಲ್ಲೆ ಅಥವಾ ಅವಮಾನಕಾರಿ ವರ್ತನೆಗಳನ್ನು ಎಸಗಿದ್ದಾನೆಯೇ ಎಂಬುದು. ಈ ಹಿನ್ನೆಲೆಯಲ್ಲಿ, ಪ್ರಾಸಿಕ್ಯೂಷನ್‌ನ ಪ್ರಮುಖ ಸಾಕ್ಷಿಯಾದ ಪ್ರಾಸಾ 1 ರವರ ಸಾಕ್ಷ್ಯವನ್ನು ಅತ್ಯಂತ ಜಾಗರೂಕತೆಯಿಂದ ವಿಶ್ಲೇಷಿಸಬೇಕಾಗುತ್ತದೆ. ಪ್ರಾಸಾ 1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮದುವೆಯ ನಂತರ ಮೊದಲಿನ ಕೆಲವು ವರ್ಷಗಳು ಸುಖವಾಗಿದ್ದವು ಎಂದು ಹೇಳಿ, ನಂತರ ಆರೋಪಿ ಮದ್ಯಪಾನ ಮಾಡಿ ಜಗಳವಾಡುವುದು, ಅವ್ಯಾಚ್ಯ ಶಬ್ದಗಳಿಂದ ನಿಂದಿಸುವುದು ಮತ್ತು ದೈಹಿಕವಾಗಿ ಹಲ್ಲೆ ನಡೆಸುವುದು ಆರಂಭಿಸಿದನೆಂದು ವಿವರಿಸಿದ್ದಾರೆ. ಅವರು ವಿಶೇಷವಾಗಿ

ದಿನಾಂಕ 25.01.2020 ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ಘಟನೆಯನ್ನು ಉಲ್ಲೇಖಿಸಿ, ಆರೋಪಿಯು ಕೈಯಿಂದ ಹೊಡೆದು ದೈಹಿಕ ನೋವುಂಟು ಮಾಡಿದ್ದು ಹಾಗೂ ಮಾನಸಿಕ ಹಿಂಸೆ ನೀಡಿದ್ದಾನೆಂದು ಹೇಳಿದ್ದಾರೆ. ಈ ಹೇಳಿಕೆಗಳನ್ನು ಗಮನಿಸಿದಾಗ, ಪ್ರಾಸಿಕ್ಯೂಷನ್ ಪ್ರಕರಣವು ಮುಖ್ಯವಾಗಿ ಪ್ರಾಸಾ 1 ರವರ ಸಾಕ್ಷ್ಯದ ಮೇಲೆ ಅವಲಂಬಿತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

11. ಮುಂದುವರಿದು, ಪ್ರಾಸಾ 1 ರವರು ತಮ್ಮ ಸಾಕ್ಷ್ಯದಲ್ಲಿ ದಾಂಪತ್ಯ ಜೀವನದ ಹಿಂದೆ ನಡೆದ ಘಟನೆಗಳನ್ನು ವಿವರಿಸುತ್ತಾ, ಆರೋಪಿ ತನ್ನ ಮೇಲೆ ಅನುಮಾನಪಟ್ಟು ಅವ್ಯಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದನೆಂದು ಹೇಳಿದ್ದಾರೆ. ಅವರು 2016 ರಲ್ಲಿ ಮನೆಯಿಂದ ಹೊರಹಾಕಲ್ಪಟ್ಟಿದ್ದು, ನಂತರ ತವರು ಮನೆಗೆ ತೆರಳಿ ವಾಸವಿದ್ದೇನೆ ಎಂದು ಹೇಳಿದ್ದಾರೆ. ನಂತರ ಹಿರಿಯರ ಸಮಾಧಾನದಿಂದ ಮತ್ತೆ ಆರೋಪಿ ಮನೆಗೆ ಹಿಂತಿರುಗಿದರೂ, ಹಿಂಸೆ ಮುಂದುವರಿದಿತೆಂದು ತಿಳಿಸಿದ್ದಾರೆ. ಈ ಹೇಳಿಕೆಗಳು ದೀರ್ಘಕಾಲದ ವೈವಾಹಿಕ ಕಲಹವಿರುವುದನ್ನು ಸೂಚಿಸುತ್ತವೆ. ಆದರೆ, ಈ ರೀತಿಯ ಸಾಮಾನ್ಯ ಹೇಳಿಕೆಗಳನ್ನು ಕಾನೂನುಬದ್ದ “ ಕ್ರೌರ್ಯ” ಎಂದು ಪರಿಗಣಿಸಲು, ಅವುಗಳಿಗೆ ಸ್ಪಷ್ಟ ಹಾಗೂ ದೃಢವಾದ ಸಾಕ್ಷ್ಯ ಅಗತ್ಯವಿರುತ್ತದೆ. ಪ್ರಾಸಾ 1 ಅವರು ತಮ್ಮ ಸಾಕ್ಷ್ಯದಲ್ಲಿ ಜೀವನಾಂಶಕ್ಕಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದಾಗಿ ಒಪ್ಪಿಕೊಂಡಿದ್ದು, ನಂತರ 2020 ರಲ್ಲಿ ಆರೋಪಿಯ ಮನೆಗೆ ಹೋದಾಗ ಮತ್ತೊಬ್ಬ ಮಹಿಳೆ ಮನೆಯಲ್ಲಿ ಇದ್ದುದನ್ನು ಕಂಡು ಪ್ರಶ್ನಿಸಿದಾಗ ಮತ್ತೆ ಹಲ್ಲೆ ನಡೆದಿದೆ ಎಂದು ಹೇಳಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ, ಈ ಪ್ರಕರಣವು ದೀರ್ಘಕಾಲದ ದಾಂಪತ್ಯ ಕಲಹದ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡಿರುವುದು ಗೋಚರಿಸುತ್ತದೆ. ಈ ಹಿನ್ನೆಲೆ, ಈ ಪ್ರಕರಣದಲ್ಲಿ ವ್ಯಕ್ತಿಗತ ವೈಮನಸ್ಸು ಅಥವಾ ಪ್ರತೀಕಾರದ ಅಂಶಗಳಿರುವ ಸಾಧ್ಯತೆಯನ್ನು ಸಂಪೂರ್ಣವಾಗಿ ನಿರಾಕರಿಸಲು ಸಾಧ್ಯವಿಲ್ಲ.

12. ಆದರೆ, ಪ್ರಾಸಾ ರವರ ಸಾಕ್ಷ್ಯವನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಅವರು ನೀಡಿದ ವಿವರಗಳು ಸಂಪೂರ್ಣವಾಗಿ ನಿರಂತರ ಮತ್ತು ವಿಶ್ವಾಸಾರ್ಹವಾಗಿವೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಅವರು ತಮ್ಮ ದೂರನ್ನು ಪೊಲೀಸರು ಹೇಳಿದಂತೆ ಬರೆದಿದ್ದೇನೆ ಎಂದು ಒಪ್ಪಿಕೊಂಡಿರುವುದು, ದೂರಿನ ಸ್ವಾಭಾವಿಕತೆಯ ಮೇಲೆ ಗಂಭೀರ ಸಂಶಯ ಹುಟ್ಟಿಸುತ್ತದೆ. ಕ್ರಿಮಿನಲ್ ಪ್ರಕರಣಗಳಲ್ಲಿ ದೂರು ಸ್ವಯಂಸ್ಫೂರ್ತವಾಗಿರಬೇಕು ಎಂಬುದು ಪ್ರಮುಖ ತತ್ವವಾಗಿದೆ. ಈ ಅಂಶವು ಪ್ರಾಸಿಕ್ಯೂಷನ್ ಪ್ರಕರಣದ ವಿಶ್ವಾಸಾರ್ಹತೆಯನ್ನು ದುರ್ಬಲಗೊಳಿಸುತ್ತದೆ.

13. ಈ ಸಂಬಂಧದಲ್ಲಿ ನಿಪಿ 1 ದೂರನ್ನು ಪರಿಶೀಲಿಸಿದಾಗ, ಪ್ರಾಸಾ 1 ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿರುವ ಪ್ರಮುಖ ಅಂಶಗಳು ಅದರಲ್ಲಿ ಕಾಣಿಸುವುದಿಲ್ಲ. ವಿಶೇಷವಾಗಿ, ಅವರು ಘಟನೆ ನಂತರ ಚಿಕಿತ್ಸೆ ಪಡೆದಿರುವ ಬಗ್ಗೆ ದೂರಿನಲ್ಲಿ ಯಾವುದೇ ಉಲ್ಲೇಖ ಇಲ್ಲ. ಅದೇ ರೀತಿ, ದೈಹಿಕ ಹಲ್ಲೆಯ ಸ್ವರೂಪ ಮತ್ತು ಗಾಯಗಳ ವಿವರಗಳೂ ಸ್ಪಷ್ಟವಾಗಿ ನೀಡಲಾಗಿಲ್ಲ. ಜೊತೆಗೆ, ಘಟನೆ ಸಮಯದಲ್ಲಿ ಇತರರು ಹಾಜರಿದ್ದರು ಎಂಬ ಅಂಶವೂ ದೂರಿನಲ್ಲಿ ಕಾಣಿಸುವುದಿಲ್ಲ. ಈ ಮುಖ್ಯ ಅಂಶಗಳ ಅಭಾವ(**omissions**) ಗಳು ಪ್ರಕರಣದ ಮೂಲ ಅಂಶಗಳನ್ನೇ ಸ್ಪರ್ಶಿಸುವಂತಹವುಗಳಾಗಿದ್ದು, ಅವುಗಳನ್ನು ಲಘು ವೈಷಮ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ.

14. ಪ್ರಾಸಾ 1 ರವರು ತಮ್ಮ ಮೇಲೆ ದೈಹಿಕ ಹಲ್ಲೆ ನಡೆದಿದೆ ಎಂದು ಹೇಳಿದರೂ, ಅದನ್ನು ದೃಢಪಡಿಸುವ ಯಾವುದೇ ವೈದ್ಯಕೀಯ ದಾಖಲೆ ಅಥವಾ ಗಾಯ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿಲ್ಲ. ಭಾ.ದಂ.ಸಂ. ಕಲಂ 323 ಅಡಿಯಲ್ಲಿ ಅಪರಾಧ ಸಾಬೀತಾಗಲು, ಕನಿಷ್ಠ ಮಟ್ಟದಲ್ಲಿ ದೈಹಿಕ ಗಾಯದ ದೃಢೀಕರಣ ಅಗತ್ಯವಾಗುತ್ತದೆ. ಅದರ ಕೊರತೆ, ಈ ಆರೋಪವನ್ನು ದುರ್ಬಲಗೊಳಿಸುತ್ತದೆ. ಕೇವಲ ವಾಚಿಕ ಸಾಕ್ಷ್ಯವನ್ನು ಆಧರಿಸಿ ಈ ಅಂಶವನ್ನು ಸಾಬೀತಾಗಿದೆ ಎಂದು ಹೇಳುವುದು ಸುರಕ್ಷಿತವಲ್ಲ.

15. ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ 2 ಮತ್ತು ಪ್ರಾಸಾ 3 ರವರು ಪ್ರಕರಣದ ಬಗ್ಗೆ ತಿಳಿದಿಲ್ಲವೆಂದು ಸ್ಪಷ್ಟವಾಗಿ ಹೇಳಿ, ಪ್ರಾಸಿಕ್ಯೂಷನ್ ಪ್ರಕರಣಕ್ಕೆ ಯಾವುದೇ ರೀತಿಯ ಸಹಕಾರ ನೀಡಿಲ್ಲ. ಇವರನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಘೋಷಿಸಿ ಪಾಟೀ ಸವಾಲು ನಡೆಸಿದರೂ ಸಹ, ಅವರಿಂದ ಪ್ರಾಸಿಕ್ಯೂಷನ್ ಪ್ರಕರಣಕ್ಕೆ ಅನುಕೂಲವಾಗುವಂತಹ ಯಾವುದೇ ವಿಷಯ ಹೊರಬಂದಿಲ್ಲ. ಅವರ ಹಿಂದಿನ ಹೇಳಿಕೆಗಳನ್ನು ಕ್ರಮವಾಗಿ ನಿಪಿ 4 ಮತ್ತು ನಿಪಿ5 ಎಂದು ಗುರುತಿಸಲಾದರೂ, ಅವರು ಆ ಹೇಳಿಕೆಗಳನ್ನು ಸಂಪೂರ್ಣವಾಗಿ ನಿರಾಕರಿಸಿರುವ ಹಿನ್ನೆಲೆಯಲ್ಲಿ, ಆ ದಾಖಲೆಗಳಿಗೆ ಸ್ವತಂತ್ರ ಸಾಬೀತಿನ ಮೌಲ್ಯ ನೀಡಲು ಸಾಧ್ಯವಿಲ್ಲ. ಕಾನೂನು ಪ್ರಕಾರ, ಪ್ರತಿಕೂಲ ಸಾಕ್ಷಿಯ ಹಿಂದಿನ ಹೇಳಿಕೆಯನ್ನು ಕೇವಲ ವಿರೋಧಾಭಾಸ ತೋರಿಸಲು ಮಾತ್ರ ಬಳಸಬಹುದು; ಅದನ್ನು ಸತ್ಯದ ಪರ್ಯಾಯವಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಹೀಗಾಗಿ, ಪ್ರಾಸಾ 2 ಮತ್ತು ಪ್ರಾಸಾ 3 ರವರ ಸಾಕ್ಷ್ಯವು ಪ್ರಾಸಿಕ್ಯೂಷನ್ ಪ್ರಕರಣವನ್ನು ಬೆಂಬಲಿಸುವುದಕ್ಕಿಂತಲೂ, ಅದನ್ನು ದುರ್ಬಲಗೊಳಿಸುವುದಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ, ಪ್ರಾಸಾ 1 ರವರ ಏಕೈಕ ಸಾಕ್ಷ್ಯಕ್ಕೆ ಯಾವುದೇ ಸ್ವತಂತ್ರ ಪೂರಕ ಸಾಕ್ಷ್ಯ ದೊರಕದೆ ಉಳಿದಿದೆ.

16. ಮಹಜರ್ ಸಾಕ್ಷಿದಾರರಾದ ಪ್ರಾಸಾ 4 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಅವರು ಮಹಜರ್ ತಮ್ಮ ಸಮ್ಮುಖದಲ್ಲಿ ನಡೆದಿಲ್ಲವೆಂದು ಸ್ಪಷ್ಟವಾಗಿ ಹೇಳಿರುವುದು ಗಮನಾರ್ಹವಾಗಿದೆ. ಅವರು ಮಹಜರ್ ಮೇಲೆ ಸಹಿ ಮಾಡಿದ್ದೇನೆ ಎಂದು ಒಪ್ಪಿಕೊಂಡರೂ, ಅದರಲ್ಲಿ ಏನು ಬರೆಯಲಾಗಿದೆ ಎಂಬುದರ ಬಗ್ಗೆ ತಿಳಿದಿಲ್ಲವೆಂದು ಹೇಳಿರುವುದು, ಮಹಜರ್ ಪ್ರಕ್ರಿಯೆಯ ಸತ್ಯಾಸತ್ಯತೆಯ ಮೇಲೆಯೇ ಗಂಭೀರ ಸಂಶಯ ಹುಟ್ಟಿಸುತ್ತದೆ. ಮಹಜರ್ (ನಿಪಿ 2) ಕೃತ್ಯ ಸ್ಥಳದಲ್ಲಿಯೇ, ಪಂಚರ ಸಮ್ಮುಖದಲ್ಲಿ ಸರಿಯಾಗಿ ನಡೆಯಬೇಕು ಎಂಬುದು ಪ್ರಕ್ರಿಯಾತ್ಮಕವಾಗಿ ಅತ್ಯಂತ ಮುಖ್ಯವಾದ ಅಂಶವಾಗಿದೆ. ಆದರೆ, ಮಹಜರ್ ಸಾಕ್ಷಿದಾರನೇ

ಅದನ್ನು ನಿರಾಕರಿಸಿರುವ ಸಂದರ್ಭದಲ್ಲಿ, ಮಹಜರ್ ದಾಖಲೆಯನ್ನು ಸುರಕ್ಷಿತವಾಗಿ ಅವಲಂಬಿಸಲು ಸಾಧ್ಯವಿಲ್ಲ. ಇದರಿಂದ, ಕೃತ್ಯ ಸ್ಥಳದ ಪರಿಶೀಲನೆ ಮತ್ತು ತನಿಖೆಯ ಗುಣಮಟ್ಟದ ಮೇಲೆ ಸಂಶಯ ಹುಟ್ಟುತ್ತದೆ. ಹೀಗಾಗಿ, ನಿಪಿ 2 ಮಹಜರ್ ಪ್ರಾಸಿಕ್ಯೂಷನ್ ಪ್ರಕರಣಕ್ಕೆ ಯಾವುದೇ ದೃಢೀಕರಣ ನೀಡುವುದಿಲ್ಲ.

17. ತನಿಖಾಧಿಕಾರಿಗಳಾದ ಪ್ರಾಸಾ 5 ಮತ್ತು ಪ್ರಾಸಾ 6 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಅವರು ಕೇವಲ ತನಿಖೆಯ ಕ್ರಮಬದ್ಧತೆಯನ್ನು ವಿವರಿಸಿರುವುದು ಗೋಚರಿಸುತ್ತದೆ. ಪ್ರಾಸಾ 5 ಅವರು ದೂರನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿ (ನಿಪಿ 7) ದಾಖಲಿಸಿರುವುದು, ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ನಡೆಸಿರುವುದಾಗಿ ಹೇಳಿರುವುದು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿರುವುದಾಗಿ ಹೇಳಿದ್ದಾರೆ. ಆದರೆ, ಮಹಜರ್ ಸಾಕ್ಷಿದಾರರ ಹೇಳಿಕೆಯನ್ನು ಗಮನಿಸಿದಾಗ, ಪ್ರಾಸಾ 5 ರವರ ಈ ಹೇಳಿಕೆಗಳನ್ನು ಸಂಪೂರ್ಣವಾಗಿ ನಂಬಲು ಸಾಧ್ಯವಿಲ್ಲ. ಇನ್ನೂ, ಪ್ರಾಸಾ 6 ರವರು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ ಹೇಳಿದರೂ, ಅವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಲ್ಲ. ಅವರ ಸಾಕ್ಷ್ಯವು ಕೇವಲ ದಾಖಲೆಗಳ ಪರಿಶೀಲನೆ ಮತ್ತು ತನಿಖೆಯ ಮುಂದುವರಿದ ಹಂತವನ್ನು ಮಾತ್ರ ತೋರಿಸುತ್ತದೆ. ಕಾನೂನು ಪ್ರಕಾರ, ತನಿಖಾಧಿಕಾರಿಯ ಸಾಕ್ಷ್ಯವು ಸ್ವತಂತ್ರ ದೃಢೀಕರಣವಿಲ್ಲದೆ ಅಪರಾಧವನ್ನು ಸಾಬೀತುಪಡಿಸಲು ಸಾಕಾಗುವುದಿಲ್ಲ. ಹೀಗಾಗಿ, ಪ್ರಾಸಾ 5 ಮತ್ತು ಪ್ರಾಸಾ 6 ರವರ ಸಾಕ್ಷ್ಯವು ಪ್ರಾಸಿಕ್ಯೂಷನ್ ಪ್ರಕರಣದ ಮೂಲ ಆರೋಪಗಳನ್ನು ಸ್ಥಾಪಿಸಲು ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ.

18. ಇದಲ್ಲದೆ, ಭಾ.ದಂ.ಸಂ. ಕಲಂ 498 ಎ ಅಡಿಯಲ್ಲಿ "ಕ್ರೌರ್ಯ" ಸಾಬೀತಾಗಲು, ಪತ್ನಿಯ ಮೇಲೆ ನಿರಂತರವಾದ ಮತ್ತು ಗಂಭೀರವಾದ ಮಾನಸಿಕ ಅಥವಾ ದೈಹಿಕ ಹಿಂಸೆ ನಡೆದಿರುವುದನ್ನು ದೃಢಪಡಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಪ್ರಾಸಾ 1 ಸಾಮಾನ್ಯ ದಾಂಪತ್ಯ

ಕಲಹಗಳು ಮತ್ತು ಜಗಳಗಳ ಬಗ್ಗೆ ಮಾತ್ರ ಹೇಳಿದ್ದು, ಅವುಗಳನ್ನು ದೃಢಪಡಿಸುವ ಯಾವುದೇ ಸ್ವತಂತ್ರ ಮತ್ತು ವಿಶ್ವಾಸಾರ್ಹ ಸಾಕ್ಷ್ಯ ಲಭ್ಯವಿಲ್ಲ. ಹಾಗೆಯೇ, ಭಾ.ದಂ.ಸಂ. ಕಲಂ 504 ಅಡಿಯಲ್ಲಿ ಅಪರಾಧ ಸಾಬೀತಾಗಲು ಉದ್ದೇಶಪೂರ್ವಕ ಅವಮಾನ ಮತ್ತು ಶಾಂತಿಭಂಗ ಉಂಟುಮಾಡುವ ಪ್ರಚೋದನೆ ಅಗತ್ಯವಾಗುತ್ತದೆ. ಈ ಅಂಶಗಳ ಬಗ್ಗೆ ಸ್ಪಷ್ಟ ಹಾಗೂ ದೃಢವಾದ ಸಾಕ್ಷ್ಯ ಇಲ್ಲ. ಇನ್ನೂ, ಭಾ.ದಂ.ಸಂ. ಕಲಂ 323 ಅಡಿಯಲ್ಲಿ ದೈಹಿಕ ಹಲ್ಲೆಯ ಆರೋಪಕ್ಕೂ ಯಾವುದೇ ವೈದ್ಯಕೀಯ ದಾಖಲೆ ಅಥವಾ ಗಾಯ ಪ್ರಮಾಣ ಪತ್ರ ಸಲ್ಲಿಸಲಾಗಿಲ್ಲ. ಹೀಗಾಗಿ, ಈ ಎಲ್ಲಾ ಅಂಶಗಳನ್ನು ಒಟ್ಟಾಗಿ ಪರಿಗಣಿಸಿದಾಗ, ಪ್ರಾಸಿಕ್ಯೂಷನ್ ತನ್ನ ಪ್ರಕರಣವನ್ನು ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಲು ವಿಫಲವಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಈ ಸಂದರ್ಭದಲ್ಲಿ, ಕ್ರಿಮಿನಲ್ ನ್ಯಾಯವಿಧಾನದ ಮೂಲ ತತ್ವವಾದ "ಸಂದೇಹದ ಲಾಭ"ವನ್ನು ಆರೋಪಿಗೆ ನೀಡುವುದು ಅನಿವಾರ್ಯವಾಗುತ್ತದೆ. ಆದ್ದರಿಂದ **ಅಂಶ ಸಂಖ್ಯೆ 1 ನ್ನು ನಕರಾತ್ಮಕವಾಗಿ ಉತ್ತರಿಸಿದ್ದೇನೆ.**

19. **ಅಂಶ.2:** ಅಂಶ 1 ಕ್ಕೆ ನೀಡಿರುವ ವಿವರವಾದ ಚರ್ಚೆ ಮತ್ತು ಅವುಗಳಿಗೆ ನೀಡಿರುವ ಕಾರಣಗಳಿಗೆ ಅಂಶ.2 ಕ್ಕೆ ಈ ಕೆಳಗಿನಂತೆ ಆದೇಶ ಮಾಡುತ್ತೇನೆ.

**:ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸಿ ಆರೋಪಿಯ ವಿರುದ್ಧ ಆರೋಪಿಸಲಾದ ಭಾರತೀಯ ದಂಡ ಸಂಹಿತೆ ಕಲಂ 498 ಎ, 323 ಹಾಗೂ 504 ರ ಅಡಿಯಲ್ಲಿ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರಪರಾಧಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯು ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಈ ದಿನದಿಂದ 6 ತಿಂಗಳವರೆಗೆ ಮುಂದುವರೆಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲದಲ್ಲಿ ದಿನಾಂಕ 30 ನೇ ಏಪ್ರಿಲ್ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

**ಸಹಿ**/-

(**ಚೈತ್ರ ಎಲ್**, )
**ಸಿವಿಲ್ ನ್ಯಾಯಾಧೀಶರು**
**ಮತ್ತು.ಜೆ.ಎಂ.ಎಫ್.ಸಿ, ಕುಶಾಲನಗರ**

KAKD200007642020



## ಅನುಬಂಧ:

### 1. ಆಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :

| | | |
|---|---|---|
| ಪ್ರಾಸಾ–1 | : | ಶೋಭ ಎಂ.ಜೆ |
| ಪ್ರಾಸಾ–2 | : | ಗೋಪಾಲ |
| ಪ್ರಾಸಾ–3 | : | ದಿವ್ಯ |
| ಪ್ರಾಸಾ–4 | : | ಶಂಕರಪ್ಪ |
| ಪ್ರಾಸಾ–5 | : | ರಾಜೇಶ್ ಹೆಚ್.ಎಂ |
| ಪ್ರಾಸಾ–6 | : | ವೆಂಕಟರಮಣ |

### 2. ಅಭಿಯೋಜನಾ ಪರ ಹಾಜರುಪಡಿಸಿದ ದಾಖಲೆಗಳು:

| | | |
|---|---|---|
| ನಿಶಾನೆ ಪಿ.1 | : | ದೂರು |
| ನಿಶಾನೆ ಪಿ.1(ಎ) | : | ಪ್ರಾಸಾ–1 ರವರ ಸಹಿ |
| ನಿಶಾನೆ ಪಿ.1(ಬಿ) | : | ಪ್ರಾಸಾ–5 ರವರ ಸಹಿ |
| ನಿಶಾನೆ ಪಿ.2 | : | ಮಹಜರು |
| ನಿಶಾನೆ ಪಿ.2(ಎ ) | : | ಪ್ರಾಸಾ–1 ರವರ ಸಹಿ |
| ನಿಶಾನೆ ಪಿ.2(ಬಿ ) | : | ಪ್ರಾಸಾ–2 ರವರ ಸಹಿ |
| ನಿಶಾನೆ ಪಿ.2(ಸಿ ) | : | ಪ್ರಾಸಾ–4 ರವರ ಸಹಿ |
| ನಿಶಾನೆ ಪಿ.2(ಡಿ ) | : | ಪ್ರಾಸಾ– 5 ರವರ ಸಹಿ |
| ನಿಶಾನೆ ಪಿ.3 | : | ಮದುವೆ ಆಮಂತ್ರಣ ಪತ್ರಿಕೆ |
| ನಿಶಾನೆ ಪಿ.4 | : | ಪ್ರಾಸಾ–2 ರವರ ಹೇಳಿಕೆ |
| ನಿಶಾನೆ ಪಿ.5 | : | ಪ್ರಾಸಾ–3 ರವರ ಹೇಳಿಕೆ |
| ನಿಶಾನೆ ಪಿ.6 | : | ಪ್ರಾಸಾ–4 ರವರ ಹೇಳಿಕೆ |
| ನಿಶಾನೆ ಪಿ7 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ.7(ಎ) | : | ಪ್ರಾಸಾ–5 ರವರ ಸಹಿ |

### 3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:ಇಲ್ಲ–

### 4. ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳು: ಇಲ್ಲ–

### 5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೇಮಾಲುಗಳು : ಇಲ್ಲ–

ಸಹಿ/–

**ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ, ಕುಶಾಲನಗರ**